# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ: 16-12-2020 ರಂದು ಸಂಜೆ 4:00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 16ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಎಸ್. ವಿದ್ಯಾಶಂಕರ್**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ಲಿಂಗರಾಜ ಗಾಂಧಿ**<br>ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿಗಳು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ)<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಷಣ್ಮುಖ**<br>ಡೀನ್ (ಅಧ್ಯಯನ ಕೇಂದ್ರಗಳು),<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಕವಿತಾ ರೈ**<br>ಕುಲಸಚಿವ (ಪರೀಕ್ಷಾಂಗ) (ಪ್ರ.ಭಾ) ಹಾಗು<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಲಕ್ಷ್ಮಿ .ಎಸ್**<br>ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ಹಾಗು<br>ಸಂಶೋಧನಾ ವಿಭಾಗ<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| ಗೈರುಹಾಜರಿ | |
| **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | |
| ವಿಶೇಷ ಆಹ್ವಾನಿತರು | |
| **ಡಾ. ನಿರಂಜನ್ ರಾಜ್**<br>CIQA ನಿರ್ದೇಶಕರು<br>ಕರಾಮುವಿ, ಮೈಸೂರು. | **ಡಾ. ಹೆಚ್. ರಾಜೇಶ್ವರಿ**<br>ವಿಶೇಷಾಧಿಕಾರಿ – ODL<br>ಕರಾಮುವಿ, ಮೈಸೂರು. |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, 16ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲು ಡೀನ್ (ಶೈಕ್ಷಣಿಕ) ಅವರಿಗೆ ಸೂಚಿಸಿದರು.

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 16.01

ವಿಷಯ : ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ವಿವಿಧ ಹಂತಗಳಿಗೆ ವೃತ್ತಿ ಪದೋನ್ನತಿ ಯೋಜನೆಯಡಿ(CAS) ಪದೋನ್ನತಿ ನೀಡುವ ಸಂಬಂಧ ಯು.ಜಿ.ಸಿ ನಿಯಮಾವಳಿ ಪ್ರಕಾರ ಸಿದ್ಧಪಡಿಸಲಾಗಿರುವ Blank API Score-card ಮತ್ತು Bio Data ನಮೂನೆಗಳಿಗೆ ಅನುಮೋದನೆ ಪಡೆಯುವ ಬಗೆಗೆ.

* * * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಹಾಗೂ ತತ್ಸಮಾನ ವೃಂದದವರಿಗೆ ಯು.ಜಿ.ಸಿ ನಿಯಮಗಳನ್ವಯ "UGC Career Advancement Scheme" "Regulations 2010 with subsequent amendments and UGC Regulations 2018" ರ ಪ್ರಕಾರ, ವಿವಿಧ ಹಂತಗಳಿಗೆ ಪದೋನ್ನತಿ ನೀಡುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಅಧ್ಯಾಪಕರುಗಳು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸುವ ಸಂಬಂಧ ವಿಶ್ವವಿದ್ಯಾನಿಲಯದ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/598/2020-21 ದಿನಾಂಕ: 12.06.2020ರ ಆದೇಶದನ್ವಯ 'ಪರಿಶೀಲನಾ ಸಮಿತಿ'ಯನ್ನು ರಚಿಸಲಾಗಿರುತ್ತದೆ.

Academic Level-10 to 11 (AGP 6000 to 7000) ಹಂತದ ಪದೋನ್ನತಿಗಾಗಿ ಅಧ್ಯಾಪಕರುಗಳು ಸಲ್ಲಿಸಿರುವ ಅರ್ಜಿಗಳನ್ನು 'ಪರಿಶೀಲನಾ ಸಮಿತಿಯವರು "Regulations 2010 with subsequent amendments and UGC Regulations 2018" ರಲ್ಲಿ ನಿಗದಿಪಡಿಸಿರುವ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಿ, ಅರ್ಹತಾ ಮಾನದಂಡ ಹಾಗೂ ಎ.ಪಿ.ಐ ಅಂಕಗಳನ್ನು ನಮೂದಿಸುವ ಸಂಬಂಧ Blank Score Card ನಮೂನೆಗಳನ್ನು ಸಿದ್ಧಪಡಿಸಿರುತ್ತಾರೆ (ನಮೂನೆ **'ಅನುಬಂಧ-ಅ'**).

ಪರಿಶೀಲನಾ ಸಮಿತಿಯವರು ಸಹಾಯಕ ಪ್ರಾಧ್ಯಾಪಕರುಗಳು ಸಲ್ಲಿಸಿರುವ ಅರ್ಜಿಗಳನ್ನು ಯು.ಜಿ.ಸಿ. ನಿಯಮಾವಳಿ ಹಾಗೂ ರಚಿಸಿಕೊಂಡಿರುವ ಪರಿನಿಯಮದನ್ವಯ ನಿಗದಿಪಡಿಸಿರುವ ಅರ್ಹತಾ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾಥಮಿಕ ಹಂತದ ಪರಿಶೀಲನಾ ಕಾರ್ಯವನ್ನು ಪೂರ್ಣಗೊಳಿಸಿರುತ್ತಾರೆ.

ದಿನಾಂಕ: 30-05-2020 ರಂದು ನಡೆದ 160 ನೇ ವ್ಯವಸ್ಥಾಪನಾ ಮಂಡಳಿಯ ತೀರ್ಮಾನ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಅಧ್ಯಾಪಕರುಗಳಿಗೆ Academic Level : 10 to 11 ಹಂತದ ಪದೋನ್ನತಿ ನೀಡುವ ಸಂಬಂಧ Screening-cum-Evaluation Committee ಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಗಿ, ದಿನಾಂಕ: 03.10.2020 ರಂದು Screening-cum-Evaluation Committee ಯನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯದಲ್ಲಿನ ವಿವಿಧ ಅಧ್ಯಯನ ವಿಭಾಗಗಳ ಬಹುತೇಕ ಮುಖ್ಯಸ್ಥರುಗಳು ಪದೋನ್ನತಿಗೆ ಸಂಬಂಧಿಸಿದಂತೆ ಅರ್ಜಿದಾರರಾಗಿರುವ ಕಾರಣ, ಇವರುಗಳನ್ನು ಮೇಲಿನ ಸಮಿತಿಗೆ ನಾಮನಿರ್ದೇಶನ ಮಾಡದೆ, ಪರಿನಿಯಮ 14.1.5 (A)(ii & iii)ರ ಪ್ರಕಾರ, ಹೊರಗಿನ ವಿಶ್ವವಿದ್ಯಾನಿಲಯಗಳಿಂದ ವಿಷಯವಾರು ಡೀನ್ (ವಿದ್ಯಾವಿಷಯಕ), ವಿಭಾಗ ಮುಖ್ಯಸ್ಥರು ಹಾಗೂ ವಿಷಯ ತಜ್ಞರುಗಳನ್ನು ನಾಮನಿರ್ದೇಶನ ಮಾಡಲಾಗಿರುತ್ತದೆ. ಅದರಂತೆ, ಪ್ರತ್ಯೇಕ ಕಚೇರಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ.

ಕುಲಸಚಿವರು                                                                                    ಕುಲಪತಿಗಳು

ಮುಂದುವರೆದು ದಿನಾಂಕ: 27-05-2019ರ ಅಧಿಸೂಚನೆಯನ್ವಯ ಆಹ್ವಾನಿಸಲಾಗಿದ್ದ ಉಳಿದ ಹಂತದ i.e., Assistant Professor (Senior Scale / Academic Level-11) to Assistant Professor (Selection Grade / Academic Level – 12); Assistant Professor (Selection Grade / Academic Level-12) to Associate Professor (Academic Level – 13A) ಹಾಗೂ Associate Professor (Academic Level-13A) to Professor (Academic Level – 14) ಹಂತದ ಪದೋನ್ನತಿ ನೀಡುವ ಸಂಬಂಧ ಪದೋನ್ನತಿಗೆ ಸಂಬಂಧಿಸಿದಂತೆ, Blank API Score Card 'ಅನುಬಂಧ-ಆ' ಮತ್ತು Bio-Data Format 'ಅನುಬಂಧ-ಇ' ರನ್ವಯ ಸಿದ್ಧಪಡಿಸಲಾಗಿದ್ದು, ಶೈಕ್ಷಣಿಕ ಮಂಡಳಿ ಸಭೆಯ ಅನುಸಮರ್ಥನೆ/ಅನುಮೋದನೆಗಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> : ಸದರಿ ವಿಷಯದಲ್ಲಿನ ಅಂಶಗಳನ್ನು ಗಮನಿಸಲಾಯಿತು. Academic Level-10 to 11 (AGP 6000 to 7000) ಹಂತದ ಪದೋನ್ನತಿಗಾಗಿ ಅಧ್ಯಾಪಕರುಗಳು ಸಲ್ಲಿಸಿರುವ ಅರ್ಜಿಗಳನ್ನು 'ಪರಿಶೀಲನಾ ಸಮಿತಿಯವರು "Regulations 2010 with subsequent amendments and UGC Regulations 2018" ರಲ್ಲಿ ನಿಗದಿಪಡಿಸಿರುವ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಿರುವ ಅರ್ಹತಾ ಮಾನದಂಡ ಹಾಗು ಎ.ಪಿ.ಐ ಅಂಕಗಳನ್ನು ನಮೂದಿಸುವ ಸಂಬಂಧ Blank API Score Card ನಮೂನೆಗಳನ್ನು ಅನುಸಮರ್ಥನೆಗೊಳಿಸಲಾಯಿತು (ನಮೂನೆ 'ಅನುಬಂಧ–ಅ').

ಉಳಿದ ಹಂತದ **i.e., Assistant Professor (Senior Scale / Academic Level-11) to Assistant Professor (Selection Grade / Academic Level – 12); Assistant Professor (Selection Grade / Academic Level-12) to Associate Professor (Academic Level – 13A)** ಹಾಗೂ **Associate Professor (Academic Level-13A) to Professor (Academic Level – 14)** ಹಂತದ ಪದೋನ್ನತಿ ನೀಡುವ ಸಂಬಂಧ ಪದೋನ್ನತಿಗೆ ಸಂಬಂಧಿಸಿದಂತೆ, **Blank API Score Card** 'ಅನುಬಂಧ–ಆ' ಮತ್ತು **Blank Bio-Data Format** 'ಅನುಬಂಧ–ಇ' ರನ್ವಯ ಸಿದ್ಧಪಡಿಸಿರುವ ನಮೂನೆಯನ್ನು ಅನುಮೋದಿಸಲಾಯಿತು.

## ವಿಷಯ ಸಂಖ್ಯೆ: 16.02

**ವಿಷಯ: ಡಾ. ಮಂಜುನಾಥ.ಸಿ.ಎಸ್, ಸಹಾಯಕ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು, ಇವರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸುವ ಬಗೆಗೆ.**

******

ಡಾ. ಮಂಜುನಾಥ .ಸಿ.ಎಸ್. ಸಹಾಯಕ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು–06 ಇವರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಸಂಶೋಧನಾ ಮಾರ್ಗದರ್ಶಕರಾಗಲು ಎಲ್ಲಾ ಅರ್ಹತೆಗಳನ್ನು ಹೊಂದಿದ್ದು, ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಕೋರಿ ದಿನಾಂಕ: 02–11–2020 ರಂದು ಡೀನ್(ಶೈಕ್ಷಣಿಕ)ರವರ ವಿಭಾಗಕ್ಕೆ ಮನವಿ ಸಲ್ಲಿಸಿದ್ದರು, ಸದರಿ

ಕುಲಸಚಿವರು ಕುಲಪತಿಗಳು

ಮನವಿಯನ್ನು ಅಧ್ಯಯನ ವಿಭಾಗದ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯಲ್ಲಿ ಯುಜಿಸಿ ನಿಯಮಾವಳಿಗಳ ಪ್ರಕಾರ ಪರಿಶೀಲಿಸಿ, ಕೈಗೊಂಡ ಶಿಫಾರಸ್ಸನ್ನು ನಡಾವಳಿಯಲ್ಲಿ ದಾಖಲಿಸಿ, ಸದರಿ ನಡಾವಳಿಯನ್ನು ಡೀನ್(ಶೈಕ್ಷಣಿಕ)ರವರ ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ದಿನಾಂಕ: 07-11-2020ರಂದು ವಿಭಾಗಕ್ಕೆ ಕಳುಹಿಸಲಾಗಿತ್ತು.

ದಿನಾಂಕ: 06-12-2020 ರಂದು ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯಲ್ಲಿ ಡಾ. ಮಂಜುನಾಥ .ಸಿ.ಎಸ್. ರವರ ಪಿಹೆಚ್.ಡಿ ಅರ್ಜಿ ಮತ್ತು ಸಂಬಂಧಪಟ್ಟ ದಾಖಲಾತಿಗಳನ್ನು ಸಭೆಯು ಪರಿಶೀಲಿಸಿ, UGC & KSOU Ph.D ಅಧ್ಯಾದೇಶದ ಅನ್ವಯ ಸಲ್ಲಿಸಿರುವ ದಾಖಲಾತಿಗಳು ಸಮ್ಮತವಾಗಿದ್ದು, ಸದರಿಯವರು Ph.D ಮಾರ್ಗದರ್ಶಕರಾಗಲು ಅರ್ಹರಾಗಿದ್ದಾರೆ ಎಂದು ಸರ್ವಾನುಮತದಿಂದ ಒಪ್ಪಿಗೆ ನೀಡಿ ಶಿಫಾರಸ್ಸು ಮಾಡಿರುತ್ತಾರೆ. ಹಾಗು ಕರಾಮುವಿಯ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಹೆಸರನ್ನು <u>**"ಭೂಗೋಳಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ"**</u> ಎಂದು ಪರಿಗಣಿಸಲು ಸ್ನಾತಕೋತ್ತರ ಅಧ್ಯಯನ ಮಂಡಳಿಯು ಸರ್ವಾನುಮತದಿಂದ ತೀರ್ಮಾನಿಸಿ ಶಿಫಾರಸ್ಸು ಮಾಡಿರುತ್ತದೆ. (ನಡಾವಳಿಯ ಪ್ರತಿಯನ್ನು ಅಡಕಗೊಳಿಸಲಾಗಿದೆ) ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> : **ಡಾ. ಮಂಜುನಾಥ ಸಿ.ಎಸ್, ಸಹಾಯಕ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು, ಇವರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಸಂಶೋಧನಾ ಮಾರ್ಗದರ್ಶಕರಾಗಲು ಸಲ್ಲಿಸಿದ್ದ ಅರ್ಜಿಯನ್ನು ಭೂಗೋಳಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಮಂಡಳಿಯು ಶಿಫಾರಸ್ಸು ಮಾಡಿರುವುದನ್ನು ಅನುಮೋದಿಸಲಾಯಿತು. ಅಂತಯೇ, ಕರಾಮುವಿಯ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಹೆಸರನ್ನು <u>"ಭೂಗೋಳಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ"</u> ವೆಂದು ನಾಮಾಂಕಿತವನ್ನು ಬದಲಾಯಿಸುವ ಸಂಬಂಧ ಸೂಕ್ತ ಕ್ರಮವಹಿಸಲು ಅನುಮೋದಿಸಲಾಯಿತು.**

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</u>

## ವಿಷಯ ಸಂಖ್ಯೆ: 16.03

**ವಿಷಯ: ಡಾ. ರಶ್ಮಿ .ಬಿ.ಎಸ್, ಸಹಾಯಕ ಪ್ರಾಧ್ಯಾಪಕರು, ಮಾಹಿತಿ ತಂತ್ರಜ್ಞಾನ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು ಇವರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸುವ ಬಗೆಗೆ.**

******

ಡಾ. ರಶ್ಮಿ .ಬಿ.ಎಸ್, ಸಹಾಯಕ ಪ್ರಾಧ್ಯಾಪಕರು, ಮಾಹಿತಿ ತಂತ್ರಜ್ಞಾನ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು-06 ಇವರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಸಂಶೋಧನಾ ಮಾರ್ಗದರ್ಶಕರಾಗಲು ಎಲ್ಲಾ ಅರ್ಹತೆಗಳನ್ನು ಹೊಂದಿದ್ದು, ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಕೋರಿ ದಿನಾಂಕ: 17-11-2020 ರಂದು

**ಕುಲಸಚಿವರು** **ಕುಲಪತಿಗಳು**

ಡೀನ್(ಶೈಕ್ಷಣಿಕ)ರವರ ವಿಭಾಗಕ್ಕೆ ಮನವಿ ಸಲ್ಲಿಸಿದ್ದರು, ಸದರಿ ಮನವಿಯನ್ನು ಅಧ್ಯಯನ ವಿಭಾಗದ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯಲ್ಲಿ ಯುಜಿಸಿ ನಿಯಮಾವಳಿಗಳ ಪ್ರಕಾರ ಪರಿಶೀಲಿಸಿ, ಕೈಗೊಂಡ ಶಿಫಾರಸ್ಸನ್ನು ನಡಾವಳಿಯಲ್ಲಿ ದಾಖಲಿಸಿ, ಸದರಿ ನಡಾವಳಿಯನ್ನು ಡೀನ್(ಶೈಕ್ಷಣಿಕ)ರವರ ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ದಿನಾಂಕ: 20-11-2020ರಂದು ವಿಭಾಗಕ್ಕೆ ಕಳುಹಿಸಲಾಗಿದೆ.

ದಿನಾಂಕ: 05-12-2020 ರಂದು ಮಾಹಿತಿ ತಂತ್ರಜ್ಞಾನ ಅಧ್ಯಯನ ವಿಭಾಗದ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯಲ್ಲಿ ಡಾ. ರಶ್ಮಿ .ಬಿ.ಎಸ್ ರವರ ಪಿಹೆಚ್.ಡಿ ಅರ್ಜಿ ಮತ್ತು ಸಂಬಂಧಪಟ್ಟ ದಾಖಲಾತಿಗಳನ್ನು ಸಭೆಯು ಪರಿಶೀಲಿಸಿ, The application and documents including the publications of Dr. Rashmi .B.S for guideship was scrutinized thoroughly. As she meets the eligibility criteria for guideship UGC, Minimum Standards and Procedure for Awards of M.Phil./Ph.D. Degree Regulation-2016 (UGC No. F..1/2009 (EC/PS) V(I) VOL II dated 5th May 2016) and KSOU Degree of Doctor of Philosophy Ordinance-2012, 2nd Amendement 2019 dated 26-12-2019 (KSOU/Dean(A)/04/2019-20, Dated: 23-01-2020 10.1 and 10.2) ಸಲ್ಲಿಸಿರುವ ದಾಖಲಾತಿಗಳು ಸಮ್ಮತವಾಗಿದ್ದು, ಸದರಿಯವರು Ph.D ಮಾರ್ಗದರ್ಶಕರಾಗಲು ಅರ್ಹರಾಗಿದ್ದಾರೆ ಎಂದು ಸರ್ವಾನುಮತದಿಂದ ಒಪ್ಪಿಗೆ ನೀಡಿ ಶಿಫಾರಸ್ಸು ಮಾಡಿರುತ್ತಾರೆ (ನಡಾವಳಿಯ ಪ್ರತಿಯನ್ನು ಅಡಕಗೊಳಿಸಲಾಗಿದೆ). ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಿದೆ.

**<u>ತೀರ್ಮಾನ</u> : ಡಾ. ರಶ್ಮಿ ಬಿ.ಎಸ್. ಅವರು ಮಾರ್ಗದರ್ಶಕರಾಗಲು ಸಲ್ಲಿಸಿದ್ದ ಅರ್ಜಿಯನ್ನು ಮಾಹಿತಿ ವಿಜ್ಞಾನ ಸ್ನಾತಕೋತ್ತರ ಅಧ್ಯಯನ ಮಂಡಳಿ ಶಿಫಾರಸ್ಸು ಮಾಡಿರುವುದನ್ನು ಅನುಮೋದಿಸಲಾಯಿತು ಹಾಗು ಮಾಹಿತಿ ವಿಜ್ಞಾನ ವಿಭಾಗವನ್ನು "ಮಾಹಿತಿ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ" ವೆಂದು ನಾಮಾಂಕಿತವನ್ನು ಬದಲಾಯಿಸುವ ಸಂಬಂಧ ಸೂಕ್ತ ಕ್ರಮವಹಿಸಲು ಅನುಮೋದಿಸಲಾಯಿತು.**

**<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</u>**

**ವಿಷಯ ಸಂಖ್ಯೆ: 16.04**

ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ UGC (Promotion of Academic Integrity & Prevention of Plagiarism in Higher Educational Institutions) Regulations 2018 dated: 23rd July 2018ಗೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಸಮಗ್ರತೆ ಹಾಗು ಕೃತಿಚೌರ್ಯ ತಡೆಗಟ್ಟುವಿಕೆಯನ್ನು ಜಾರಿಗೆ ತರುವ ಸಲುವಾಗಿ UGC (Promotion of Academic Integrity & Prevention

**ಕುಲಸಚಿವರು** **ಕುಲಪತಿಗಳು**

of Plagiarism in Higher Educational Institutions) Regulations 2018 dated: 23rd July 2018 ನಿಯಮಾವಳಿಯ ಆಧಾರದ ಮೇಲೆ ಕರಡು ಮಾರ್ಗಸೂಚಿಯನ್ನು ಸಿದ್ಧಪಡಿಸಲಾಗಿದೆ. UGC ODL and OL 2020 ನಿಯಮಾವಳಿಗಳಲ್ಲಿ, ವಿ.ವಿ.ಯ ಮಟ್ಟದಲ್ಲಿ ಇಂತಹ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳಲು ಸೂಚಿಸಿರುವ ಹಿನ್ನೆಲೆಯಲ್ಲಿ ಸದರಿ ಮಾರ್ಗಸೂಚಿಗಳನ್ನು ರಚಿಸಲಾಗಿದೆ.

ಸದರಿ ಮಾರ್ಗಸೂಚಿಯನ್ನು ವಿಶ್ವವಿದ್ಯಾನಿಲಯದ ಅಧ್ಯಾಪಕರ ಬರವಣಿಗೆಗಳಾದ ಸಿದ್ಧಪಾಠ, ಸಂಶೋಧನಾ ಲೇಖನ, ಸಂಶೋಧನಾ ವಿದ್ಯಾರ್ಥಿಗಳ ಲೇಖನ ಇನ್ನೂ ಮುಂತಾನವುಗಳಿಗೆ ಅನ್ವಯಿಸುವಂತೆ ಸಿದ್ಧಪಡಿಸಿ ಶೈಕ್ಷಣಿಕ ಮಂಡಳಿ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಿದೆ.

:

<u>ತೀರ್ಮಾನ:</u> ವಿ.ವಿ.ಯು ಅಧ್ಯಯನ ಸಾಮಗ್ರಿಯ ಬರವಣಿಗೆಯಲ್ಲಿ **Plagiarism** ಸಂಬಂಧಿತ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು, ಸದರಿ ಮಾರ್ಗಸೂಚಿಗಳನ್ನು **CBCS Committee** ಯಲ್ಲಿ ಮಂಡಿಸಿ ಪರಾಮರ್ಶಿಸಿ ಶಿಫಾರಸ್ಸು ನೀಡಿದ ನಂತರ ಅಳವಡಿಸಿಕೊಳ್ಳಲು ನಿರ್ಣಯಿಸಲಾಯಿತು.

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</u>

## ವಿಷಯ ಸಂಖ್ಯೆ: 16.05

ವಿಷಯ: ಸ್ನಾತಕೋತ್ತರ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿ (CBCS) ಅಳವಡಿಸಿದ ನೂತನ ಪಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS)ನ 2021 ಜನವರಿ ಆವರ್ತನಕ್ಕೆ ಅಳವಡಿಸಿಕೊಳ್ಳುವ ಸಂಬಂಧ ಕನ್ನಡ, ಇಂಗ್ಲಿಷ್, ವಾಣಿಜ್ಯಶಾಸ್ತ್ರ, ರಸಾಯನಶಾಸ್ತ್ರ, ಜೀವರಸಾಯನಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಮತ್ತು ಭೂಗೋಳಶಾಸ್ತ್ರ ಅಧ್ಯಯನ ವಿಭಾಗಗಳು ಪಠ್ಯಕ್ರಮವನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ.

ಸದರಿ ಅಧ್ಯಯನ ವಿಭಾಗಗಳ ಪಠ್ಯಕ್ರಮವನ್ನು ಶೈಕ್ಷಣಿಕ ಮಂಡಳಿ ಸಭೆಗೆ ಅನುಮೋದನೆಗಾಗಿ ಮಂಡಿಸಿದೆ.

:

<u>ತೀರ್ಮಾನ</u> : ಸದರಿ ಅಧ್ಯಯನ ವಿಭಾಗಗಳ **CBCS** ಆಧಾರಿತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

ಕುಲಸಚಿವರು

ಕುಲಪತಿಗಳು

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು: ಕುಲಸಚಿವರು (ಪರೀಕ್ಷಾಂಗ) ಮಂಡಿಸಿರುವ ವಿಷಯ</u>

**ವಿಷಯ ಸಂಖ್ಯೆ: 16.06**

ವಿಷಯ: ವಿಶ್ವವಿದ್ಯಾನಿಲಯದಲ್ಲಿ 2012-13ನೇ ಸಾಲಿನ ಸಹಭಾಗಿತ್ವ ಸಂಸ್ಥೆಗಳ ವಿವಿಧ ಕೋರ್ಸ್‌ಗಳಿಗೆ (ತಾಂತ್ರಿಕೇತರ) ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ಒಂದು ಬಾರಿಗೆ ಪದವಿ ಪ್ರಮಾಣ ಪತ್ರ ವಿತರಿಸುವ ಬಗ್ಗೆ.

ಉಲ್ಲೇಖ: 1) Letter from The Special Secretary to Governor, Rajbhavan, Bangalore No:GS 13 KOM 2014 (P2) Dt:24-07-2020.

****

ವಿಶ್ವವಿದ್ಯಾನಿಲಯದ 2012-13ನೇ ಸಾಲಿನಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದು ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ದಿ: 05-03-2019 ರಂದು 16ನೇ ಘಟಿಕೋತ್ಸವವನ್ನು ನಡೆಸಿ, ಪದವಿ ಪ್ರಮಾಣಪತ್ರಗಳನ್ನು ವಿತರಿಸಲಾಗುತ್ತಿದೆ. ಈ ಸಾಲಿನಲ್ಲಿ ಪದವಿ ಪೂರ್ಣಗೊಳಿಸಿದ In-house ವಿದ್ಯಾರ್ಥಿಗಳಿಗೆ ಮಾತ್ರ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದ್ದು, ಸದರಿ ಸಾಲಿನಲ್ಲಿ ಪದವಿ ಪೂರ್ಣಗೊಳಿಸಿದ ಸಹಭಾಗಿತ್ವ ಸಂಸ್ಥೆಗಳ ತಾಂತ್ರಿಕೇತರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೂ ಪದವಿ ಪ್ರಮಾಣ ಪತ್ರ ವಿತರಿಸುವ ಸಂಬಂಧ ಮಾನ್ಯ ಘನತೆವೆತ್ತ ರಾಜ್ಯಪಾಲರು ರವರಿಗೆ ದಿ: 02-07-2020 ರಂದು ಪತ್ರ ಬರೆದಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಮಾನ್ಯ ಘನತೆವೆತ್ತ ರಾಜ್ಯಪಾಲರು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ, ಸಹಭಾಗಿತ್ವ ಸಂಸ್ಥೆಗಳ ತಾಂತ್ರಿಕೇತರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೂ ಪದವಿ ಪ್ರಮಾಣ ಪತ್ರ ವಿತರಿಸುವ ಸಂಬಂಧ ದಿನಾಂಕ: 16-12-2020 ರಂದು ವಿಶೇಷ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯ ಕೈಗೊಳ್ಳಲು ವಿಷಯವನ್ನು ಮಂಡಿಸಲಾಗಿದೆ.

<u>ತೀರ್ಮಾನ</u> : **ಈ ವಿಷಯದ ಬಗ್ಗೆ ಚರ್ಚಿಸಿ, ವಿದ್ಯಾರ್ಥಿಗಳ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಲು ಅನುಮೋದನೆ ನೀಡಲಾಯಿತು.**

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</u>

**ವಿಷಯ ಸಂಖ್ಯೆ: 16.07**

ವಿಷಯ : ಕರಾಮುವಿಯಲ್ಲಿ ಕಾಮಧೇನು ಪೀಠ ಸ್ಥಾಪಿಸುವ ಕುರಿತು.

*******

ಮಾನ್ಯ ಪ್ರಧಾನ ಮಂತ್ರಿಗಳು ಗೋ ಸಂರಕ್ಷಣೆಗಾಗಿ ರಾಷ್ಟ್ರೀಯ ಕಾಮಧೇನು ಆಯೋಗವನ್ನು ಸ್ಥಾಪಿಸಿರುತ್ತಾರೆ. ಈ ಆಯೋಗದ ಉದ್ದೇಶ ದೇಶಿಯ ಗೋ ತಳಿಗಳ ಸಂರಕ್ಷಣೆ, ರಕ್ಷಣೆ ಹಾಗೂ ತಳಿಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಕಾನೂನನ್ನು ಜಾರಿಗೊಳಿಸುವುದು ಹಾಗೂ ಗೋಹತ್ಯೆ ತಡೆಯುವುದು ಹಾಗೂ ಇನ್ನಿತರೆ ಕಾರ್ಯಕ್ರಮಗಳು ಆಗಿರುತ್ತದೆ.

ರಾಷ್ಟ್ರೀಯ ಕಾಮಧೇನು ಆಯೋಗ, ಭಾರತ ಸರ್ಕಾರ ಅಧ್ಯಕ್ಷರಾದ ಡಾ. ವಲ್ಲಭಭಾಯಿ ಕತಿರಿಯಾ ಇವರು ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ತಮ್ಮ ಪತ್ರ ಸಂಖ್ಯೆ: DO No.RKA/DMS/19/2020/959, December 10, 2020 ಮೂಲಕ ಕಾಮಧೇನು ಪೀಠಗಳನ್ನು ಸ್ಥಾಪಿಸುವಂತೆ ಸೂಚಿಸಿರುತ್ತಾರೆ (ಪ್ರತಿ ಲಗತ್ತಿಸಿದೆ). ಈ ನಿಟ್ಟಿನಲ್ಲಿ ಡಿಸೆಂಬರ್ 14, 2020 ರಂದು ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳ National Webinar ನಲ್ಲಿ ಕಾಮಧೇನು ಪೀಠ ಸ್ಥಾಪಿಸುವ ಬಗ್ಗೆ ಚರ್ಚೆಯಾಗಿರುತ್ತದೆ.

ಕುಲಸಚಿವರು ಕುಲಪತಿಗಳು

ಮುಂದುವರೆದು. ಕರಾಮುವಿಯಲ್ಲಿಯೂ ಕಾಮಧೇನು ಪೀಠ ಸ್ಥಾಪಿಸಬೇಕಾಗಿರುತ್ತದೆ. ಈ ಪೀಠದ ಉದ್ದೇಶ ಹಾಗೂ ಕಾರ್ಯಚಟುವಟಿಕೆಗಳು ಈ ಕೆಳಗಿನಂತಿರುತ್ತದೆ.

Vision and Mission / Objectives of Kamdhenu Chair would be:

- Back to nature, living in Harmony with all creatures beyond Caste, Creed, Race, religion and Gender.
- To organize Talks, Quiz, Essays, Competitions, Workshops, Exhibitions, Seminars, Research and creating Programs, Fellowships, Short Term & Full time Certificate and Diploma Courses, to create Entrepreneurship and Employment opportunities for GenNext Youth to work on the COW BASED ECONOMY and align it with the 5 Trillion $ Economy vision of Shri Narendra Modi ji, Hon'ble Prime Minister of India trough "GO DHAN – RASHTRA DHAN".
- To sensitize the youth about animal husbandry on modern and scientific lines and to take steps for preserving and improving breeds and prohibiting the slaughter, of cows and calves & other milch and draught cattle.
- To sensitize the Youth for Research (SUTRA-PIC, AYUSH), create Library and explore Entrepreneurship and Employment opportunities in Cow Based Economy.
- Utilization of Cow Dung and Cow Urine for Bio-Gas, CNG and Electricity for making self relian GO-Shalas.
- To aim at transmission and application of improved technology and management practices in each corner through coordination with dairy cooperatives, farmer producer companies and dairy industry as well as research institutions.
- To achieve the objectives of Rashtriya Kamdhenu Aayog, sensitize about the Scientific. Economic, Environmental & Spiritual importance and impact of Cow.

ಈ ಪೀಠದ ಸ್ಥಾಪನೆ ಹಾಗೂ ಕಾರ್ಯ ಚಟುವಟಿಕೆಗಾಗಿ ರೂ. 15 ಲಕ್ಷಗಳನ್ನು ಕಾಯ್ದಿರಿಸುವ ಸಂಬಂಧ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ಶೈಕ್ಷಣಿಕ ಮಂಡಳಿ ಸಭೆಯ ಮುಂದೆ ವಿಷಯವನ್ನು ಮಂಡಿಸಿದೆ.

<u>ತೀರ್ಮಾನ</u> : ಕರಾಮುವಿಯಲ್ಲಿ ಕಾಮಧೇನು ಪೀಠ ಸ್ಥಾಪಿಸಲು ಅನುಮೋದಿಸಲಾಯಿತು. ಸದರಿ ಪೀಠಕ್ಕೆ ಸಂಬಂಧಿಸಿದಂತೆ ಪರಿನಿಯಮವನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದಿಂದ ಅನುಮೋದನೆ ಆದ ನಂತರ ಹಣಕಾಸು ಮೀಸಲಿಡುವ ಬಗ್ಗೆ ನಂತರ ತೀರ್ಮಾನಿಸಲು ಒಪ್ಪಲಾಯಿತು.

ಕುಲಸಚಿವರು

ಕುಲಪತಿಗಳು

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</u>

## ವಿಷಯ ಸಂಖ್ಯೆ: 16.08

ವಿಷಯ: ಪರೀಕ್ಷಾ ಸಂಭಾವನೆಯ ಮತ್ತು ಭತ್ಯೆಗಳ ಪರಿಷ್ಕರಣಾ ಸಮಿತಿ ಸಭೆಯು ಸಲ್ಲಿಸಿರುವ ವರದಿಯನ್ನು ಶೈಕ್ಷಣಿಕ ಸಭೆಯ ಮಂಡಳಿಯಲ್ಲಿ ಮಂಡಿಸುವ ಬಗ್ಗೆ.

ಉಲ್ಲೇಖ: 1. ಕರಾಮುವಿ/ಪವಿ/ಸಿಬ್ಬಂದಿ–1/ಸಂ.ನಿ.ಸ.ರ/2019–20 ದಿನಾಂಕ: 09.11.2020

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 06.11.2020

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶದಲ್ಲಿ ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಕಾರ್ಯಗಳಿಗೆ ಸಂಬಂಧಿಸಿದ ಸಂಭಾವನೆ ಮತ್ತು ಭತ್ಯೆಗಳ ಪರಿಷ್ಕರಣಾ ಸಮಿತಿ ಸಭೆಯನ್ನು ಮಾನ್ಯ ಕುಲಸಚಿವರು (ಪರೀಕ್ಷಾಂಗ) ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು. ಸದರಿ ಸಭೆಯ ಅಧ್ಯಕ್ಷರು/ಸದಸ್ಯರುಗಳು ಈ ಸಂಬಂಧ ಸಭೆಗಳನ್ನು ನಡೆಸಿ ಕೂಲಂಕುಷವಾಗಿ ಚರ್ಚಿಸಿ ಪರೀಕ್ಷಾ ಕಾರ್ಯಗಳು ಮತ್ತು ಮೌಲ್ಯಮಾಪನ ಕಾರ್ಯಕ್ಕೆ ಹೆಚ್ಚುವರಿಯಾಗಿ ನಿರ್ವಹಿಸುವ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಸಂಭಾವನೆ ಮತ್ತು ಭತ್ಯೆಗಳನ್ನು ಪಾವತಿಸುವ ಸಂಬಂಧ ಸಮಗ್ರವಾಗಿ ಚರ್ಚಿಸಿ ವರದಿಯನ್ನು ಸಲ್ಲಿಸಿರುತ್ತಾರೆ.

ಸದರಿ ಸಭೆಯ ನಡಾವಳಿ ಮತ್ತು ಪರೀಕ್ಷಾ ಕಾರ್ಯ, ಸಂಭಾವನೆ ಮತ್ತು ಭತ್ಯಗಳಿಗೆ ಸಂಬಂಧಿಸಿದ ವರದಿಯನ್ನು ದಿನಾಂಕ: 16–12–2020 ರಂದು ನಡೆಯುವ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗಿದೆ.

<u>ತೀರ್ಮಾನ</u> : **ಪರೀಕ್ಷಾ ಚಟುವಟಿಕೆಗಳಿಗೆ ಸಂಬಂಧಿಸಿದ ಕಾರ್ಯಗಳ ಸಂಭಾವನೆ, ಭತ್ಯೆಗಳನ್ನು ಪರಿಷ್ಕರಿಸಿ ವರದಿ ನೀಡಲು ನೇಮಿಸಿದ್ದ ಸಮಿತಿಯು ನೀಡಿರುವ ವರದಿಯನ್ನು ಅನುಮೋದಿಸಲಾಯಿತು ಮತ್ತು ಹಣಕಾಸು ಸಮಿತಿಗೆ ಮಂಡಿಸಲು ಸೂಚಿಸಲಾಯಿತು.**

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</u>

## ವಿಷಯ ಸಂಖ್ಯೆ: 16.09

- ವಿಶ್ವವಿದ್ಯಾನಿಲಯದ ಕೆಲವು ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿನ ಅಧ್ಯಾಪಕರು ಪಿಹೆಚ್‌ಡಿ ಮಾರ್ಗದರ್ಶಕರಾಗಲು ಕೋರಿ ಸಲ್ಲಿಸಿದ್ದ ಅರ್ಜಿಗಳ ಕುರಿತು ಸಂಬಂಧಪಟ್ಟ ವಿಭಾಗಗಳ ಅಧ್ಯಯನ ಮಂಡಳಿಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಕ್ರಮವಹಿಸದಿರುವುದನ್ನು ಶೈಕ್ಷಣಿಕ ಮಂಡಳಿಯಲ್ಲಿ ಚರ್ಚಿಸಲಾಯಿತು.
- ಆಹಾರ ಮತ್ತು ಪೌಷ್ಠಿಕತೆ ಅಧ್ಯಯನ ಮತ್ತು ಸಂಶೋಧನಾ ವಿಭಾಗವು ಇದುವರೆವಿಗೂ ಪಿಹೆಚ್.ಡಿ ಕಾರ್ಯಕ್ರಮವನ್ನು ಆರಂಭಿಸದಿರುವುದನ್ನು ಚರ್ಚಿಸಲಾಯಿತು.

<u>ತೀರ್ಮಾನ</u> : 1) ವಿಶ್ವವಿದ್ಯಾನಿಲಯದ ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಹಾಗು ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಯನ ಮಂಡಳಿ ಮುಖ್ಯಸ್ಥರಿಗೆ ಶೀಘ್ರವಾಗಿ ಸಂಶೋಧನಾ ಮಾರ್ಗದರ್ಶಕರ ಸಂಬಂಧಿತ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆ ಕರೆಯಲು ಸೂಚಿಸಲಾಯಿತು. ಸದರಿ ಅಧ್ಯಯನ ಮಂಡಳಿಯ ಶಿಫಾರಸ್ಸನ್ನು ಅನುಮೋದಿಸಲು ತೀರ್ಮಾನಿಸಲಾಯಿತು.

ಕುಲಸಚಿವರು

ಕುಲಪತಿಗಳು

2) ಆಹಾರ ಮತ್ತು ಪೌಷ್ಟಿಕತೆ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸ್ನಾತಕೋತ್ತರ ಮಂಡಳಿಯ ಅಧ್ಯಕ್ಷರಾದ ಡಾ. ಸಿ ಅನಿತಾ ಅವರು ಕಾರ್ಯಕ್ರಮವನ್ನು ಮುಂದುವರೆಸದಿರುವುದಕ್ಕೆ ಕಾರಣ ಕೊಟ್ಟಿರುವ ಪತ್ರವನ್ನು ಗಮನಿಸಿ ಸದರಿ ಪತ್ರದ ಬಗ್ಗೆ ಸ್ನಾತಕೋತ್ತರ ಅಧ್ಯಯನ ಮಂಡಳಿ ಸದಸ್ಯರ ಅಭಿಪ್ರಾಯ ಪಡೆದು ಸಲ್ಲಿಸುವಂತೆ ಸೂಚಿಸಲಾಯಿತು.

ಅಂತಿಮವಾಗಿ 16ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ, ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು